ಶಿರಾ ಸರಕಾರಿ ಪ್ರೌಢ ಶಾಲೆಯಲ್ಲಿ ಉರ್ದು ಉಪಾಧ್ಯಾಯರುಗಳ ನೇಮಕಾತಿ.

೧೧೧೨. ಶ್ರೀ ಪಿ. ಸಿ. ಮಂಡಲಗಿರಿಯಪ್ಪ (ಶಿರಾ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ಸರ್ಕಾರಿ ಪ್ರೌಢಶಾಲೆಯಲ್ಲಿ ಇದುವರೆಗೂ ಉರ್ದು ಉಪಾಧ್ಯಾಯರಿಲ್ಲದೆ ಪರೀಕ್ಷೆಗೆ ತಾವೇ ಸ್ವತಃ ಓದಿ ಬರೆಯುವಂತಹ ಪ್ರಸಂಗವನ್ನು ಮಕ್ಕಳು ಎದುರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಶಾಲೆಗೆ ಉರ್ದು ಉಪಾಧ್ಯಾಯರನ್ನು ಕೂಡಲೇ ನೇಮಿಸಲಾಗುವುದೆ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ಉರ್ದು ಉಪಾಧ್ಯಾಯರಿಲ್ಲದಿರುವುದು ಗಮನಕ್ಕೆ ಬಂದಿದೆ.

ಆ) ಈಗಾಗಲೇ ದಿನಾಂಕ ೬-೮-೮೫ ರಂದು ಒಬ್ಬ ಉರ್ದು ಶಿಕ್ಷಕರನ್ನು ನಿಯೋಜನೆ ಮೇಲೆ ನೇಮಿಸಲಾಗಿದೆ.

ಅಥಣಿ ಹಾಗೂ ಕಾಗವಾಡ ವಿಧಾನ ಸಭಾ ಕ್ಷೇತ್ರಗಳಲ್ಲಿ ವ್ಯವಸಾಯಕ್ಕೆ ಉಪಯೋಗಿಸಿದ ಜಮೀನಿನ ವಿಸ್ತೀರ್ಣ.

೧೧೧೧. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ ರಿಂದ ಈ ವರೆಗೂ ಬೆಳಗಾಂ ಜಿಲ್ಲಾ ಅಥಣಿ ತಾಲ್ಲೂಕಿನ ಕಾಗವಾಡ ಹಾಗೂ ಅಥಣಿ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿದ್ದ ಸರಾಸರಿ ಮಳೆ ಪ್ರಮಾಣವೆಷ್ಟು ?

ಆ) ಈ ತಾಲ್ಲೂಕಿನಲ್ಲಿ ಹಾಗೂ ಎರಡು ಕ್ಷೇತ್ರಗಳಲ್ಲಿ ವ್ಯವಸಾಯಕ್ಕೆ ಉಪಯೋಗಿತವಾದ ಜಮೀನಿನ ಪ್ರಮಾಣವೆಷ್ಟು ?

ಇ) ಕಳೆದ ಮೂರು ವರ್ಷಗಳಲ್ಲಿ ಬಿತ್ತನೆ ಕೆಲಸದ ಪ್ರಮಾಣವೇನು ? ಹಾಗೂ ಎಷ್ಟು ಗ್ರಾಮಗಳಲ್ಲಿ ಮಳೆ ಅಭಾವದ ಕಾರಣ ಬಿತ್ತನೆ ಕೈಬಿಡಲಾಗಿದೆ ?

ಸಚಿವರ ಪದನಾಮ: ಕೃಷಿ ರಾಜ್ಯ ಸಚಿವರು:

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ) ಕಾಗವಾಡದಲ್ಲಿ ಮಿಷ್ಮಿ ಮಾಪಕ ಕೇಂದ್ರವು ಇಲ್ಲದಿರುವುದರಿಂದ ಮಳೆಯ ಅಂಕಿ ಅಂಶಗಳು ದೊರಕುತ್ತಿಲ್ಲ. ಆದರೆ ಕಾಗವಾಡಕ್ಕೆ ಹತ್ತಿರವಿರುವ ಕೊಟನಟ್ಟಿಕ್ಕೆ ಸಂಬಂಧಪಟ್ಟಂತೆ ಮಳೆಯ ಅಂಕಿ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ. ಅಥಣಿ ಮತ್ತು ಕೊಟನಟ್ಟಿಕ್ಕೆ ಬಿದ್ದ ವಾಸ್ತವಿಕ ಹಾಗೂ ಸಾಮಾನ್ಯ ಮಳೆಯ ವಿವರ ಈ ಕೆಳಕಂಡಂತಿದೆ.

ವರ್ಷ	ಅಥಣಿ	ಕೊಟನಟ್ಟಿ
	ವಾಸ್ತವಿಕ ಬಿದ್ದ ಮಳೆ ಮಿ. ಮಿ. ನಲ್ಲಿ	ವಾಸ್ತವಿಕ ಬಿದ್ದ ಮಳೆ ಮಿ. ಮಿ. ನಲ್ಲಿ
೧೯೮೦	೩೩೫.೨	೨೯೯.೬
೧೯೮೧	೭೧೯.೦	೬೯೦.೮
೧೯೮೨	೫೨೩.೪	೧೯೮.೮
೧೯೮೩	೩೪೬.೫	೩೮೮.೭
೧೯೮೪	೩೭೪.೯	೩೨೯ ೪
೧೯೮೫ (ಜುಲೈವರೆಗೆ	೨೦೧.೫	ದೊರಕುತ್ತಿಲ್ಲ.